

## ಮದ್ದುಗಳು ವ್ಯಾಪಾರದ ಸರಕುಗಳಾದವೇ?

ಹದಿನೆಂಟನೇ ಶತಮಾನದಿಂದೀಚೆಗೆ ಔಷಧಗಳ ಸಂಶೋಧನೆ ಹಾಗೂ ಉತ್ಪಾದನೆಗಳು ದೊಡ್ಡದಾಗಿ ಬೆಳೆದವಾದರೂ, ಬಹುತೇಕ ಎಲ್ಲ ಔಷಧಗಳ ಹಕ್ಕು ಸ್ವಾಮ್ಯತೆಗಳು ಖಾಸಗಿ ವ್ಯಕ್ತಿಗಳು ಅಥವಾ ಬಂಡವಾಳಗಾರರ ಕೈಯೊಳಗಾದವು, ಜೀವವುಳಿಸುವ ಔಷಧಗಳು ಲಾಭದ ಸರಕುಗಳಾದವು. ಔಷಧ ಕಂಪನಿಗಳೂ, ಅವಕ್ಕೆ ಜೊತೆಯಾದ ರಾಸಾಯನಿಕ ಹಾಗೂ ಕಚ್ಚಾ ತೈಲ ಸಂಸ್ಕರಣೆಯ ಕಂಪನಿಗಳೂ ದೈತ್ಯರಾಗಿ ಬೆಳೆದವು, ಸರ್ಕಾರಗಳನ್ನೇ ನಿಯಂತ್ರಿಸತೊಡಗಿದವು; ಹಿಟ್ಲರನಂಥವರನ್ನೂ ಪೋಷಿಸಿ, ಇನ್ನಷ್ಟು ಕೊಬ್ಬಿದವು. ವೈದ್ಯಕೀಯ ವಲಯವೂ ಈ ಕಂಪನಿಗಳ ಪ್ರಭಾವ–ಪ್ರಲೋಭನೆಗಳಿಗೆ ಸಿಲುಕಿತು. ಭಾರತದಲ್ಲಿ ಔಷಧ ಉತ್ಪಾದನೆ, ತೈಲ ಸಂಸ್ಕರಣೆ, ವೈಜ್ಞಾನಿಕ ಸಂಶೋಧನೆ, ಆರೋಗ್ಯ ಸೇವೆಗಳನ್ನೆಲ್ಲ ಸಾರ್ವಜನಿಕ ವಲಯದಲ್ಲೇ ಬೆಳೆಸಿ ಸ್ವಾವಲಂಬಿಯಾಗಿಸಲು ಪಣ ತೊಟ್ಟಿದ್ದ ನೆಹರೂ ಅವರಂಥ ದಾರ್ಶನಿಕರ ಯೋಜನೆಗಳು ಅಲ್ಲೇ ಉಳಿದವು.

ಜಗತ್ತಿನಲ್ಲೀಗ ಆಧುನಿಕ ಔಷಧಗಳ ವಹಿವಾಟು ವರ್ಷಕ್ಕೆ ಸುಮಾರು 80 ಲಕ್ಷ ಕೋಟಿ ರೂಪಾಯಿಗಳಷ್ಟಿದೆ; ಹೋಲಿಕೆಗಾಗಿ, ಬಟ್ಟೆಬರೆಗಳ ವಹಿವಾಟು 56 ಲಕ್ಷ ಕೋಟಿ ರೂಪಾಯಿಗಳಷ್ಟು, ಸಂಸ್ಕರಿತ ಆಹಾರವಸ್ತುಗಳದ್ದು ಅದರ ನಾಲ್ಕು ಪಟ್ಟು ಇದೆ. ಜಾಗತಿಕ ಔಷಧ ವಹಿವಾಟಿನಲ್ಲಿ ಶೇ. 40ರಷ್ಟು ಪಾಲು ಅತಿ ದೊಡ್ಡ 10 ಕಂಪನಿಗಳದ್ದೇ ಆಗಿದೆ. ಭಾರತೀಯ ಔಷಧ ಕಂಪೆನಿಗಳು ವರ್ಷಕ್ಕೆ 2 ಲಕ್ಷ ಕೋಟಿ ರೂಪಾಯಿಗಳಷ್ಟು ವಹಿವಾಟು ನಡೆಸುತ್ತವೆ; ಅದರಲ್ಲಿ ದೇಶವಾಸಿಗಳ ಔಷಧ ಖರೀದಿ 85 ಸಾವಿರ ಕೋಟಿ ರೂಪಾಯಿಗಳಷ್ಟು, ಮಿಕ್ಕದ್ದು ರಫ್ತು.

ಹೆಚ್ಚಿನ ಔಷಧ ಕಂಪನಿಗಳು ಖಾಸಗಿರಂಗದಲ್ಲೇ ಇರುವುದರಿಂದ ಹೊಸ ಔಷಧಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಎಷ್ಟೇ ದೊಡ್ಡ ಮೊತ್ತದ ಹಣವನ್ನು ವೆಚ್ಚ ಮಾಡಿದರೂ ಅಷ್ಟೇ ದೊಡ್ಡ ಲಾಭವನ್ನು ಪಡೆಯುವುದಕ್ಕೆ ತಂತ್ರಗಳನ್ನೂ ಅವು ಹೊಂದಿರುತ್ತವೆ. ಹೊಸ ಔಷಧಗಳನ್ನು ಹುಡುಕಿ, ಪರೀಕ್ಷಿಸಿ, ಮಾರುಕಟ್ಟೆಗೆ ತರುವುದಕ್ಕೆ ಕಂಪನಿಗಳು ತಮ್ಮ ಆದಾಯದ ಶೇ. 15–20ರಷ್ಟನ್ನು ವ್ಯಯಿಸುತ್ತವೆ. ಆದರೆ ಆ ಔಷಧಗಳ ಪ್ರಚಾರಕ್ಕೆ ಅದರ ದುಪ್ಪಟ್ಟು ಮೊತ್ತವನ್ನು ಖರ್ಚು ಮಾಡುತ್ತವೆ; ಅದರಲ್ಲಿ ಶೇ. 90ರಷ್ಟು ಭಾಗವು ವೈದ್ಯರ ಪ್ರಲೋಭನೆಗಳಿಗೇ ಹೋಗುತ್ತದೆ. ಇಷ್ಟಾದ ಮೇಲೂ ಈ ಕಂಪನಿಗಳ ಲಾಭಾಂಶವು ಶೇ. 10ರಿಂದ 40ರಷ್ಟು, ಸರಾಸರಿ ಶೇ. 20ರಷ್ಟು, ಇರುತ್ತದೆ.

ಒಂದು ಹೊಸ ಔಷಧವನ್ನು ಅಭಿವೃದ್ಧಿಪಡಿಸಿ, ಮಾರುಕಟ್ಟೆಗೆ ತರಬೇಕಾದರೆ 2ರಿಂದ 20 ಸಾವಿರ ಕೋಟಿ ರೂಪಾಯಿಗಳಷ್ಟು ವೆಚ್ಚವಾಗುತ್ತದೆ, ಹತ್ತರಿಂದ ಹನ್ನೆರಡು ವರ್ಷಗಳಾಗುತ್ತವೆ. ಕೆಲವು ಔಷಧಗಳು ಅರ್ಧದಲ್ಲೇ ಮೊಟಕಾಗುತ್ತವೆ, ಇನ್ನು ಕೆಲವು ಮಾರುಕಟ್ಟೆಗೆ ಬಂದ ಬಳಿಕ ಸೋಲುತ್ತವೆ. ಇಷ್ಟು ಹಣವನ್ನೂ ಶ್ರಮವನ್ನೂ ವ್ಯಯಿಸುವುದಕ್ಕೆ ಯಾವ ಸರ್ಕಾರಗಳೂ ಸಿದ್ಧವಿಲ್ಲದಿರುವುದರಿಂದ, ಹೆಚ್ಚಿನ ಔಷಧಗಳೆಲ್ಲವೂ ಅವಕ್ಕೆ ಶ್ರಮ ವಹಿಸಿದ ಖಾಸಗಿ ಕಂಪನಿಗಳ ಸೊತ್ತಾಗಿಹೋಗಿವೆ. ಮಾತ್ರವಲ್ಲ, ಹೆಚ್ಚಿನ ಲಾಭಗಳನ್ನು ತರಬಲ್ಲ, ಸಿರಿವಂತರಿಗೆ ಮಾರಬಲ್ಲ ಔಷಧಗಳನ್ನು ಬೆಳೆಸುವುದಕ್ಕೆ ಈ ಕಂಪನಿಗಳು ಪ್ರಾಶಸ್ತ್ಯ ನೀಡುತ್ತಿವೆಯೇ ಹೊರತು, ಬಡ ರಾಷ್ಟ್ರಗಳ ಜನರನ್ನು ಕಾಡುವ ರೋಗಗಳಿಗಲ್ಲ.

ಖಾಸಗಿ ಕಂಪನಿಗಳು ಇಪ್ಪತ್ತು ವರ್ಷಗಳವರೆಗೆ ಔಷಧಗಳ ಮೇಲೆ ಹಕ್ಕು ಸ್ವಾಮ್ಯತೆಯನ್ನು ಹೊಂದಿರುವುದರಿಂದ ಆ ಕಾಲಾವಧಿಯಲ್ಲಿ ಅವುಗಳ ದರಗಳನ್ನು ತಮ್ಮಿಷ್ಟದಂತೆ ನಿಗದಿಪಡಿಸಲು ಸಾಧ್ಯವಾಗುತ್ತದೆ. ಹೊಸ ಔಷಧಗಳಿಗಂತೂ ಬೆಲೆ ವಿಪರೀತವಾಗಿರುತ್ತದೆ. ಉದಾಹರಣೆಗೆ, ಇತ್ತೀಚೆಗೆ ಬಳಕೆಗೆ ಬಂದ ಕ್ಯಾನ್ಸರ್ ಔಷಧಗಳಿಗೆ ಅಮೆರಿಕದಲ್ಲಿ ಒಬ್ಬ ರೋಗಿಗೆ ವರ್ಷದ ಚಿಕಿತ್ಸೆಗೆ ಸುಮಾರು ಒಂದು ಕೋಟಿ ರೂಪಾಯಿ ಬೇಕಾಗುತ್ತದೆ, ಸ್ನಾಯುಗಳ ರೋಗಕ್ಕಿರುವ ಹೊಸ ಔಷಧಕ್ಕೆ ವರ್ಷಕ್ಕೆ ಎರಡು ಕೋಟಿ ರೂಪಾಯಿಗೂ ಹೆಚ್ಚು ತಗಲುತ್ತದೆ. ಇಪ್ಪತ್ತು ವರ್ಷಗಳ ಬಳಿಕವೂ, ಔಷಧಗಳನ್ನು ಮಾರ್ಪಡಿಸಿರುವ ನೆಪವೊಡ್ಡಿ ಹಕ್ಕು ಸ್ವಾಮ್ಯತೆಯನ್ನು ಉಳಿಸಿಕೊಳ್ಳಲು ಈ ಕಂಪನಿಗಳು ಯತ್ನಿಸುತ್ತವೆ, ಆ ಮೂಲಕ


